ಮಹಾವೀರ ಕಾಸರ, ಶಿವಮೊಗ್ಗ
*ತಾಳಿ ಕಟ್ಟುವಾಗ ಗಟ್ಟಿ ಮೇಳ ಎಂದು ಹೇಳುವುದು ಏಕೆ?*




ವರನ ಜೋರಾಗಿ ಬಡಿದುಕೊಳ್ಳುತ್ತಿರುವ ಎದೆಬಡಿತದ ಸದ್ದು ಹೆಣ್ಣಿನ ಕಡೆಯವರಿಗೆ ಕೇಳದಿರಲೆಂದು!

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಈಗಿನ ರಾಜಕಾರಣದಲ್ಲಿ ವಿಭೀಷಣರೇ ಅಧಿಕವಾಗಿರುವಾಗ ರಾಮರಾಜ್ಯವೇಕೆ ಜನ್ಮವಾಗುತ್ತಿಲ್ಲ ರಾಮ್?*
ವಿಭೀಷಣರು ಇರೋದ್ರಿಂದ್ಲೇ ಆಗ್ತಿಲ್ಲ... ಅವರು ವಿರೋಧ ಪಕ್ಷ ಸೇರ್ತಾರೆ, ರಾವಣರು ಸಾಯೋವರ್ಗೂ ರಾಜ್ಯ ಆಳ್ತಾರೆ!

ವಿ.ಹೇಮಂತಕುಮಾರ್, ಬೆಂಗಳೂರು
*ಸರ್ಕಾರಿ ಖಜಾನೆಗೂ, ತಿರುಪತಿ ಹುಂಡಿಗೂ ವ್ಯತ್ಯಾಸವೇನು?*
ಹುಂಡಿಯದು ಗಣಕ್ಕೆ ಅರ್ಪಿತ, ಖಜಾನೆಯದು ಹೆಗ್ಗಣಕ್ಕೆ ಸೀಮಿತ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಎಲ್ಲರ ಬುರುಡೆಯಲ್ಲೂ ಒಂದೇ ಮೆದುಳು ಇದ್ದರೂ ಬುದ್ಧಿ ಯಾಕೆ ಬೇರೆ ಬೇರೆ?*



ಕರೆಂಟ್ ಓಲ್ಟೇಜ್ ಅದೇ ಇದ್ದರೂ ಬಳಸುವ ಬಲ್ಬು ಬಲ್ಬೇ, ಹ್ಯಾಲೋಜಿನ್ ಹ್ಯಾಲೋಜಿನ್ನೇ, ಟ್ಯೂಬ್‌ಲೈಟ್ ಟ್ಯೂಬ್‌ಲೈಟೇ!

ಆರ್. ಮಧುಸೂದನ್, ಹಾಸನ
*ಬಡತನ, ಸ್ವಾಭಿಮಾನ, ಇವೆರಡರಲ್ಲಿ ಯಾವುದು ಶ್ರೇಷ್ಠ?*
ಎರಡೂ ಶ್ರೇಷ್ಠವೇ; ನಡುವಿಗೆ ಬಡತನ, ಮನಕ್ಕೆ ಸ್ವಾಭಿಮಾನ.

ಅಮರಯ್ಯ ಪತ್ರಿಮಠ, ಸುರಪೂರ
*ನಮ್ಮ ಭವಿಷ್ಯಕ್ಕೂ, ದೂರದಲ್ಲಿರುವ ಗ್ರಹಗಳಿಗೂ ಏನು ಸಂಬಂಧ?*
ಬದುಕಿಗೆ ಬೇಕಾದ್ದು ಎರಡೇ ಗ್ರಹಗಳು– ಸಂ–ಗ್ರಹ, ಅನು– ಗ್ರಹ. ಮಿಕ್ಕವೆಲ್ಲಾ ವೇಸ್ಟೋ ವೇಸ್ಟು.

ಎಂ.ಎನ್. ಸೋಮಶೇಖರ್, ಮೈಸೂರು
*ಜೇಡ ಕಟ್ಟಿದ ಬಲೆಗೂ, ಬೇಡ ಹಾಕಿದ ಬಲೆಗೂ ಏನು ವ್ಯತ್ಯಾಸ?*
ಬೇಡನ ಸಿದ್ಧಾಂತ ಮರಳಿ ಯತ್ನವ ಮಾಡು ಮನುಜ ಮೀನು ದೊರಕುವ ತನಕ , ಜೇಡದ್ದು ಕರ್ಮಣ್ಯೇವಾಧಿಕಾರಸ್ತೇ...

ಜಾಕೋಬ್ ಡಿಸೋಜ, ಕುರುವಳ್ಳಿ
*ಅಪ್ರಿಯವಾದ ಸತ್ಯ ಯಾವುದು?*
ನಮಗಾಗದವರು ಹೊಂದಿದ ಏಳ್ಗೆಗೆ ನಿಜಕ್ಕೂ ಅವರು ಅರ್ಹರೆಂಬ ಸತ್ಯ.

ವಿ. ಹಮೀದ್, ವಿಟ್ಲ
*ನನ್ನ ಲವ್ವರ್ ತುಂಬಾ ತೆಳ್ಳಗಿದ್ದಾಳೆ. ಏನ್ಮಾಡಲಿ?*
ಏನೂ ಕೊಡಿಸದೆ ಉದ್ದುದ್ದ ವಾಕಿಂಗ್ ಕರ್ಕೊಂಡ್ಹೋಗೋ ಕಂಜೂಸ್ ಬುದ್ಧಿ ಬಿಟ್ಟು ಒಂದ್ಕಡೆ ಕೂಡ್ಸಿ, ಚಾಕ್ಲೇಟ್, ಐಸ್ಕ್ರೀಂ ಕೊಡಿಸಿ.

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಹೆಣ್ಣು ಅಸಲು ಇದ್ದಂತೆ; ಸೌಂದರ್ಯ ಬಡ್ಡಿ ಇದ್ದಂತೆ. ಮದುವೆ...?*
ಕೋ–ಆಪರೇಟಿವ್ ಬ್ಯಾಂಕ್! ಚೆನ್ನಾಗಿ ನಡೆದರೆ ವೃದ್ಧಿ, ಇಲ್ಲವಾದರೆ ದಿವಾಳಿ.

ಎಂ.ಎಸ್. ಮಂಜರ್, ಬಂಡಳ್ಳಿ
*ಗಿಡಕ್ಕೆ ನೀರು ಹಾಕಿದರೆ ಹಣ್ಣು ಕೊಡುತ್ತದೆ. ರಾಜಕಾರಣಿಗೆ ಮತ ಹಾಕಿದರೆ?*
ಅವರೂ ಹಣ್ಣು ತಿನ್ನಿಸುತ್ತಾರೆ, ಚಳ್ಳೇಹಣ್ಣು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಅವನು ಹಠಮಾರಿ, ಅವಳು ಬಜಾರಿ. ಅವರಿಬ್ಬರ ಮಕ್ಕಳು?*
ಅಲೆಮಾರಿ!

ಮುರಲೀಧರ ಕುಲಕರ್ಣಿ, ಬೀದರ್
*ನಾಳೆ ಮಾಡುವುದನ್ನು ಇಂದು ಮಾಡು, ಇಂದು ಮಾಡುವುದನ್ನು ಈಗಲೇ ಎಂಬುದನ್ನು ಕೊಲೆಗಾರರು, ದರೋಡೆಕೋರರು ಅಳವಡಿಸಿಕೊಂಡರೆ?*
ಎಲ್ಲಕ್ಕೂ ವಿಮೆ ಮಾಡಿಸಿ ಗಂಗೆ ಪಕ್ಕದಲ್ಲಿಟ್ಟುಕೊಂಡು ಹಾಯಾಗಿ ಕುಳಿತುಬಿಡಿ.

## ಬಹುಮಾನಿತ ಪ್ರಶ್ನೆ

ಎಸ್. ಕೃಷ್ಣಮೂರ್ತಿ, ಕನಕಪುರ
*ಕನ್ಯೆ ನೋಡಲು ಹೊರಟಿರುವೆ. ಮುಂದಿನಿಂದ ನೋಡಲೋ, ಹಿಂದಿನಿಂದ ನೋಡಲೋ, ಎಡದಿಂದ ನೋಡಲೋ, ಬಲದಿಂದ ನೋಡಲೋ?*
ರಿವಾಲ್ವಿಂಗ್ ಛೇರ್‌ನಲ್ಲಿ ಕೂಡಿಸಿ ಗಿರ್ರನೆ ತಿರುಗಿಸಿ ನೋಡಿಬಿಡಿ!

ಡಾ. ವಿ. ಪುಗಳೇಂದಿ, ಬಳ್ಳಾರಿ
*ಕಂಬನಿ ಸುಖವಾಗುವುದು ಯಾವಾಗ, ಶೋಕವಾಗುವುದು ಯಾವಾಗ?*
ಕಂಬನಿ ಶತ್ರುವಿನದಾದಾಗ ಸುಖ, ನಮ್ಮದೇ ಆದಾಗ ಶೋಕ.

ಪಿ.ಜೆ. ರಾಘವೇಂದ್ರ, ಮೈಸೂರು
*ಚುನಾವಣೆಯಲ್ಲಿ ಸೋತವರನ್ನು ವನವಾಸಕ್ಕೆ ಕಳಿಸುವಂತಿದ್ದರೆ...?*
ಕೆಲವೇ ವರ್ಷಗಳಲ್ಲಿ ಕಾಡುಪ್ರಾಣಿಗಳು ನಾಸ್ತಿ, ಕಾಡುವ ಪೂಜಾರಿಗಳು ಜಾಸ್ತಿ ಆಗುತ್ತದೆ.

ಎಂ. ಈ. ನೇಹವರ್ಷಿಣಿ, ಬಳ್ಳಾರಿ
*ಹೆಣ್ಣಿನ ಸೌಂದರ್ಯಕ್ಕೂ, ಪ್ರಕೃತಿ ಸೌಂದರ್ಯಕ್ಕೂ ಏನು ವ್ಯತ್ಯಾಸ?*



ಮೇಕಪ್ ಬಾಕ್ಸ್.

ಹಾಡ್ಯ ಬಿ. ಜಯಾನಂದ, ಮೈಸೂರು
*ಸಂಪತ್ತಿನಿಂದ ಹೆಸರು ಬರುತ್ತದೆ. ಹೆಸರಿನಿಂದ ಸಂಪತ್ತು ಬರುತ್ತದೆಯೆ?*
ಬರದೇ ಏನು! ಹೆಸರಿನಿಂದಲೂ ಬರುತ್ತದೆ, ಕಡಲೆಯಿಂದಲೂ ಬರುತ್ತದೆ, ತೊಗರಿಯಿಂದಲೂ ಬರುತ್ತದೆ.

ಎಸ್.ಜಿ. ಕರನಂದಿ, ಹುನಗುಂದ
*ಅರ್ಚಕ, ಶಾಸಕ ಮತ್ತು ಸೇವಕ, ಈ ಮೂವರಲ್ಲಿ ಯಾರು ಹೆಚ್ಚಿನವರು?*
ಇದರಲ್ಲಿ ಹೆಚ್ಚು ಕಡಿಮೆಯ ಮಾತೇ ಇಲ್ಲ. ಮೂವರೂ ಸೇವಕರೇ  ದೇಗುಲಕ್ಕೆ, ಸಂಕುಲಕ್ಕೆ, ಕುಲಕ್ಕೆ!

■ ರಾಮ್